ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ವಾದಿ ಮತ್ತು ಪ್ರತಿವಾದಿಗಳು ಒಂದೇ ಊರಿನವರು ಮತ್ತು ಅಕ್ಕ ಪಕ್ಕದ ಮನೆಯವರು ಎಂದರೆ ಸರಿ. ನಾನು ಮತ್ತು 1ನೇ ಪ್ರತಿವಾದಿ ಸ್ನೇಹಿತರು ಎಂದರೆ ಸರಿ. ಊರಿನಲ್ಲಿ ದೇವಸ್ಥಾನ ಕಟ್ಟುವಾಗ ಮತ್ತು ಇತರೆ ಕೆಲಸ ಮಾಡುವಾಗ ನಾನು ಮತ್ತು 1ನೇ ಪ್ರತಿವಾದಿ ಜೊತೆಯಾಗಿಯೇ ಇರುತ್ತೇವೆ ಎಂದರೆ ಸರಿ. ನಾನು ಮತ್ತು 1ನೇ ಪ್ರತಿವಾದಿ ಬೇರೆ ಬೇರೆ ರಾಜಕೀಯ ಪಕ್ಷದವರು ಎಂದರೆ ಸರಿ. ಚುನಾವಣೆ ವಿಚಾರವಾಗಿ ನನಗೂ ಮತ್ತು 1ನೇ ಪ್ರತಿವಾದಿ ನಡುವೆ ಸೀಟು ಬಿಟ್ಟುಕೊಡದೇ ಇರುವ ವಿಚಾರಕ್ಕೆ ವೈಮನಸ್ಸು ಉಂಟಾಗಿತ್ತು ಎಂದರೆ ಸರಿ. ವಾದಿಯ ನಾದಿನಿ ಮತ್ತು 1ನೇ ಪ್ರತಿವಾದಿಯ ಹೆಂಡತಿ ಚುನಾವಣೆಗೆ ನಿಂತಿದ್ದರು ಎಂದರೆ ಸರಿ. ಆ ಸಂದರ್ಭದಲ್ಲಿ ನಮಗೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ ನಾವು ಚೆನ್ನಾಗಿಯೇ ಇದ್ದೇವೆ ಎಂದು ನುಡಿಯುತ್ತಾರೆ.

ದಾವಾ ಸರ್ವೆ ನಂಬರ್ 88/1ರಲ್ಲಿ 9 ಕಾಲು ಗುಂಟೆ ಜಮೀನು ಇದೆ. ದಿನಾಂಕ 30.12.2015ರಂದು ವ್ಯಾಪಾರದ ಮಾತುಕತೆಯಾಗಿತ್ತು. ಆ ಮಾತುಕತೆಗೆ ವಾದಿ, ನಾನು, ಮೋಹನ್ ರಾವ್ ಮತ್ತು ಪ್ರತಿವಾದಿ ಸೇರಿದ್ದೆವು. ಆ ಸಮಯದಲ್ಲಿ ಒಟ್ಟು ಜಮೀನಿಗೆ ಮಾತುಕತೆಯಾಗಿತ್ತು ಗುಂಟೆ 90 ಸಾವಿರದಂತೆ ನಿಗಧಿಯಾಗಿತ್ತು. ಗುಂಟೆ 90 ಸಾವಿರರದಂತೆ ಮಾತಕತೆಯಾದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಮತ್ತು ಕರಾರು ಪತ್ರದಲ್ಲಿ ಬರೆಸಿಲ್ಲ ಆದರೆ ನಾವು ಒಟ್ಟು ಜಮೀನಿಗೆ ಮಾತುಕತೆ ಮಾಡಿದ್ದೆವು ಎಂದು ನುಡಿಯುತ್ತಾರೆ. ಕರಾರು ಪತ್ರ ಬರೆಸಿಕೊಳ್ಳುವಾಗ ಪ್ರತಿವಾದಿರವರ ಮಕ್ಕಳ ಸಹಿ ಪಡೆದುಕೊಂಡಿಲ್ಲ. ದಾವಾ

ಆಸ್ತಿ ಪ್ರತಿವಾದಿಯ ತಾತನ ಆಸ್ತಿ ಖರೀದಿಸಿದ ಆಸ್ತಿ ಅಲ್ಲ ಎಂದರೆ ಸರಿ. ಪ್ರತಿವಾದಿಯು ಸಾಲಕ್ಕೋಸ್ಕರ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. 5ವರೆ ಲಕ್ಷ ಹಣದ ಭದ್ರತೆಗಾಗಿ ಪ್ರತಿವಾದಿರವರು ವಾದಿಗೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ವಾದಿರವರು ನಂಜನಗೂಡಿನಲ್ಲಿ ವಾಸವಿರುತ್ತಾರೆ ಎಂದರೆ ಸರಿ. ವಾದಿಗೆ ಅಲ್ಲಿ ವ್ಯವಸಾಯ ಜಮೀನು ಇಲ್ಲ.

ವಾದಿಯ ತಮ್ಮ ಮೋಹನ್ ರಾವ್ ನಾನು ಮತ್ತು ವಾದಿರವರಿಗೆ ಪ್ರತಿವಾದಿ ರವರು 5ವರೆ ಲಕ್ಷಕ್ಕೆ ಬಡ್ಡಿ ಸೇರಿ 10 ಲಕ್ಷ ಹಣವನ್ನು ವಾಪಸ್ಸು ಬರುವುದಾಗಿ ಕೇಳಿದ್ದರು ಎಂದರೆ ಸಾಕ್ಷಿ ವಾದಿ ಶಾಂತಬಾಯಿ ಒಪ್ಪಲಿಲ್ಲ ಎಂದು ನುಡಿಯುತ್ತಾರೆ. ಹಣವನ್ನು ಮುಂದಿನ ವಾರ ತೆಗೆದುಕೂಳ್ಳುತ್ತೇವೆ ಎಂದು ಹೇಳಿ ಹೋದವರು ಪುನಃ ಬರಲೇ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ರಸ್ತೆಗೆ ಸ್ವಾಧೀನ ಪಡಿಸಿಕೊಂಡಿರುವುದರಿಂದ ಹೆಚ್ಚಿನ ಲಾಭ ಬರುತ್ತದೆ ಎಂದು ವಾದಿರವರ ಜೊತೆ ಸೇರಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿರವರು ಸಾಲಕ್ಕೆ ಕರಾರುಪತ್ರ ಬರೆದುಕೂಟ್ಟಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.